**ಸಿಸಿ ಸಂಃ 20/2016**

**2ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಹೊಸಕೋಟೆ**

| | |
|---|---|
| ಸಾಕ್ಷಿದಾರರ ಹೆಸರು : ಮಂಜುನಾಥ | ಪಿ ಡಬ್ಲ್ಯೂ -1 ಸಿ ಡಬ್ಲ್ಯೂ -1 |
| ತಂದೆ / ಗಂಡನ ಹೆಸರುಃ ವೆಂಕಟಪ್ಪ | ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿ: 27.05.2026 |
| ವಯಸ್ಸುಃ 62 ವರ್ಷ | |
| ವೃತ್ತಿಃ ವ್ಯವಸಾಯ | |
| ವಾಸ ಸ್ಥಳಃ ಜಿನ್ನಾ ನಗರ | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನನಗೆ ಆರೋಪಿಗಳ ಪರಿಚಯ ಇರುತ್ತದೆ. ಆರೋಪಿಗಳು ನಮ್ಮ ಊರಿನವರಾಗಿರುತ್ತಾರೆ. ಆರೋಪಿಗಳು ಗುಂಪು ಕಟ್ಟಿಕೊಂಡು ನಮ್ಮ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿರುವುದಿಲ್ಲ, ನನಗೆ ಅವಾಚ್ಯ ಶಬ್ಧಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಆರೋಪಿಗಳ ವಿರುದ್ಧ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಿದ್ದು, ಅದು ದೂರು ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ದಾಖಲೆಯನ್ನು **Ex.P-1** ಎಂದು, ಸಾಕ್ಷಿಯ ಸಹಿಯನ್ನು **Ex.P-1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಅದು ಪಂಚನಾಮೆ ಆಗಿದ್ದು, ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಕಾರಣ, ದಾಖಲೆಯನ್ನು **Ex.P-2** ಎಂದು, ಸಾಕ್ಷಿಯ ಸಹಿಯನ್ನು **Ex.P-2(ಎ)** ಎಂದು ಗುರುತಿಸಲಾಯಿತು. ಪೋಲಿಸರು ಎರಡು ಕಾಗದಗಳಿಗೆ ಸಹಿ ಮಾಡಿ ಎಂದು ಹೇಳಿದ ಕಾರಣ ನಾನು ಎರಡು ಕಾಗದಗಳಿಗೆ ನನ್ನ ಸಹಿ ಹಾಕಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ವಿಚಾರಿಸಬೇಕಾಗಿ ಎಪಿಪಿರವರು ಸಾಕ್ಷಿಯನ್ನು ವಾಟೀ ಸವಾಲು ಮಾಡಬೇಕಾಗಿ ನ್ಯಾಯಾಲಯದಲ್ಲಿ ವಿನಂತಿಸಿದ ಮೇರೆಗೆ ಅನುಮತಿಯನ್ನು ನೀಡಿರುತ್ತದೆ.)**

**ವಾಟೀ ಸವಾಲುಃ ಸರ್ಕಾರದ ಪರವಾಗಿ ಎಪಿಪಿ ರವರಿಂದಃ**

ದಿ.21.11.2014ರಂದು ಬೆಳಿಗ್ಗೆ 8.00ಗಂಟೆ ಸಮಯದಲ್ಲಿ ಜಿನ್ನಾನಗರ ಗ್ರಾಮದಲ್ಲಿ ಆರೋಪಿಗಳು ನನ್ನ ಜಮೀನಿಗೆ ಅತಿಕ್ರಮಣ ಪ್ರವೇಶ ಮಾಡಿ ನಿರ್ಮಿಸಿದ್ದ ಬೇಲಿ ಕಾಂಪೌಂಡ್ ನ್ನು ಕಿತ್ತು ಹಾಕಿ, ಕೇಳಲು ಹೋದ ನನಗೆ ಅವಾಚ್ಯ ಶಬ್ಧಗಳಿಂದ ಬೈದು, ಬೇಲಿ ಗಿಡದಲ್ಲಿ ಹಾಕಿ ಸುಟ್ಟು ಹಾಕುವುದಾಗಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲಿನಂತೆ ನಾನು ಪೋಲೀಸ್ ಠಾಣೆ ಗೆ ಹೋಗಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಿ.21.11.2014ರಂದು ಮಧ್ಯಾಹ್ನ 3.00-4.00ಗಂಟೆಯವರೆಗೆ ನಾನು ತೋರಿಸಿದ ಘಟನಾ ಸ್ಥಳವಾದ ಜಿನ್ನಾನಗರದ ನನ್ನ ವಾಸದ ಮನೆಯ ಪಕ್ಕದಲ್ಲಿ ಇರುವ ಖಾಲಿ ಜಾಗದಲ್ಲಿ ನನ್ನ, ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆಯ ಕ್ರಮ ಜರುಗಿಸಿ ಬರೆದ ಪಂಚನಾಮೆಗೆ ನಾನು, ಚಾಸಾ-4 ಮತ್ತು 5 ರವರು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈಗ ನಾನು ಮತ್ತು ಆರೋಪಿಗಳು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿದ್ದರಿಂದ, ಆರೋಪಿ ಪರ ಪಾಟೀ ಸವಾಲನ್ನು ಇಲ್ಲ ಎಂದು ಪರಿಗಣಿಸಲಾಯಿತು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಎಂ ಒ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಸಕೋಟೆ